# ಸುನಿಲ್ ಆಗ್ರೋ ಫುಡ್ಸ್ ಲಿಮಿಟೆಡ್

**CIN:L01111KA1988PLC008861**

ನೋಂದಾಯಿತ ಕಚೇರಿ: ಪ್ಲಾಟ್ ನಂ.39-ಎ2, ಹೊಸಕೋಟೆ ಕೈಗಾರಿಕಾ ಪ್ರದೇಶ, ಚೊಕ್ಕಹಳ್ಳಿ, ಹೊಸಕೋಟೆ, ಬೆಂಗಳೂರು – 562 114. Phone +91- 80- 27971371/ 27971463

Website: http://www.sunilagro.in, E-mail: info@sunilagro.in


## 32ನೇ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯ ಸೂಚನೆ ಇ-ಮತದಾನ ಮಾಹಿತಿ ಮತ್ತು ಪುಸ್ತಕಗಳ ಮುಚ್ಚುವಿಕೆ

ದಿನಾಂಕ 22 ಜುಲೈ, 2020 ರ ಸೂಚನೆಪತ್ರದಲ್ಲಿ ತಿಳಿಸಿರುವಂತೆ ವಿಡಿಯೊ ಸಮಾವೇಶ (ವಿಸಿ) ಅಥವಾ ಇತರ ಆಡಿಯೊ ದೃಶ್ಯ ಮಾಧ್ಯಮಗಳ (ಒಎವಿಎಮ್) ಮೂಲಕ ವ್ಯಾಪಾರದ ವಹಿವಾಟು ನಡೆಸಲು ಸೋಮವಾರ, 24 ಆಗಸ್ಟ್, 2020 ರಂದು ಬೆಳಿಗ್ಗೆ 10.30ಕ್ಕೆ ಕಂಪನಿಯ ಮೂವತ್ತೆರಡನೆ (32ನೇ) ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ನಡೆಸಲಾಗುವುದು ಎಂದು ಈ ಮೂಲಕ ಸೂಚನೆ ನೀಡಲಾಗುತ್ತಿದೆ. ದಿನಾಂಕ ಏಪ್ರಿಲ್ 8, 2020 ಮತ್ತು ಏಪ್ರಿಲ್ 13, 2020 ರ ಸುತ್ತೋಲೆ (ಸಂಚಿತವಾಗಿ "ಎಮ್ ಸಿ ಎ ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗಿದೆ)ಮತ್ತು ದಿನಾಂಕ ಮೇ 12, 2020 ರ ಸೆಬಿ ಸುತ್ತೋಲೆಗಳ ಜೊತೆ ಓದಿಕೊಂಡಂತೆ ದಿನಾಂಕ ಮೇ 5, 2020 ರ ಸಾಂಸ್ಥಿಕ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಸುತ್ತೋಲೆಯೊಂದಿಗೆ ಕಂಪನಿ/ಠೇವಣಿ ಭಂಡಾರ (ಡೆಪಾಸಿಟರಿ) ಯೊಂದಿಗೆ ತಮ್ಮ ಇ ಮೈಲ್ ವಿಳಾಸಗಳನ್ನು ನೋಂದಾಯಿಸಿಕೊಂಡ ಸದಸ್ಯರಿಗೆ ವಿದ್ಯುನ್ಮಾನ ಮಾಧ್ಯಮದ ಮೂಲಕ ಸರ್ವಸದಸ್ಯರ ಸಾಮಾನ್ಯ ಸಭೆಯ ಸೂಚನೆಯನ್ನು ಕಂಪನಿಯು 3 ಆಗಸ್ಟ್, 2020 ರಂದು ರವಾನಿಸಿದೆ.

ಕಂಪನಿಯ ಸದಸ್ಯರಿಗೆ ಈಗ ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಗಳ ಆಡಳಿತ ಮತ್ತು ನಿರ್ವಹಣೆ (ತಿದ್ದುಪಡಿ) ನಿಯಮಗಳು, 2015 ರ ನಿಯಮ 20 ರ ಜೊತೆ ಓದಿಕೊಂಡಂತೆ ಭಾರತದ ಭದ್ರತೆ ಮತ್ತು ವಿನಿಮಯ ಮಂಡಲಿ ನಿಯಂತ್ರಣಗಳು, 2015 ರ ನಿಬಂಧನೆ 44 (ಬಾಧ್ಯತೆಗಳ ಲಿಸ್ಟಿಂಗ್ ಮತ್ತು ಬಹಿರಂಗಪಡಿಸುವಿಕೆ ಅವಶ್ಯಕತೆಗಳು) ಅನ್ವಯ, ಕೇಂದ್ರ ಭಂಡಾರ ಸೇವೆಗಳು (ಇಂಡಿಯಾ) ಲಿಮಿಟೆಡ್ (ಸಿಡಿಎಸ್ಎಲ್) ಅವರಿಂದ ಒದಗಿಸಲಾದ ವಿದ್ಯುನ್ಮಾನ ಮತಚಲಾವಣೆ ವ್ಯವಸ್ಥೆ (ಇ-ಮತದಾನ) ಬಳಸಿ ಸರ್ವಸದಸ್ಯರ ಸಾಮಾನ್ಯ ಸಭೆಯ ಸೂಚನೆಪತ್ರದಲ್ಲಿ ತಿಳಿಸಿರುವಂತೆ ಎಲ್ಲಾ ಠರಾವುಗಳ ಬಗ್ಗೆ ಸದಸ್ಯರು ತಮ್ಮ ಮತವನ್ನು ಚಲಾಯಿಸಲು ಸೌಲಭ್ಯ ಒದಗಿಸಲಾಗಿದೆ.

ಇ-ಮತಚಲಾವಣೆಯು ಆಯ್ಕೆ ಬಿಟ್ಟದ್ದಾಗಿದ್ದು, ಮತಚಲಾವಣೆಗೆ ಕೊನೆಯ ದಿನಾಂಕವಾದ 17 ಆಗಸ್ಟ್, 2020 ರ ಪ್ರಕಾರ ಈಕ್ವಿಟಿ ಶೇರುಗಳನ್ನು ಹೊಂದಿರುವ ಸದಸ್ಯರಿಗೆ ಇ-ಮತಚಲಾವಣೆ ಹಕ್ಕುಗಳಿರುತ್ತವೆ. ದೂರಗಾಮಿ ಇ-ಮತಚಲಾವಣೆ ಪ್ರಕ್ರಿಯೆಯು 21 ಆಗಸ್ಟ್, 2020 (ಬೆಳಿಗ್ಗೆ 9 ಗಂಟೆಗೆ) ಆರಂಭವಾಗಿ 23 ಆಗಸ್ಟ್, 2020 (ಸಂಜೆ 5 ಗಂಟೆಗೆ) ಮುಕ್ತಾಯಗೊಳ್ಳುತ್ತದೆ. ಈ ಅವಧಿಯಲ್ಲಿ, ಸದಸ್ಯರು ತಮ್ಮ ಮತವನ್ನು ವಿದ್ಯುನ್ಮಾನ ಮಾಧ್ಯಮದ ಮೂಲಕ ಮತ ಚಲಾಯಿಸಬಹುದು. ತದನಂತರ ಇ-ಮತದಾನ ಮಾಡ್ಯೂಲ್ ಅನ್ನು ಸಿಡಿಎಸ್ಎಲ್ ನಿಷ್ಕ್ರಿಯಗೊಳಿಸುತ್ತದೆ.ವಿಸಿ/ಒಎವಿಎಮ್ ಸೌಲಭ್ಯದ ಮೂಲಕ ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಹಾಜರಿರುವಂಥ ಮತ್ತು ದೂರಗಾಮಿ ಮತಚಲಾವಣೆ ಮೂಲಕ ಠರಾವುಗಳ ಮೇಲೆ ತಮ್ಮ ಮತವನ್ನು ಚಲಾಯಿಸದಿರುವ ಸದಸ್ಯರು ಮತ್ತು ಮತಚಲಾಯಿಸಲು ತಡೆಹಿಡಿಯಲಾದ ಸದಸ್ಯರು, ಸರ್ವ ಸದಸ್ಯರ ಸಭೆ ನಡೆಯುವ ಸಂದರ್ಭದಲ್ಲಿ ಇ-ಮತದಾನದ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಇ-ಮತದಾನದ ಮೂಲಕ ತಮ್ಮ ಮತವನ್ನು ಚಲಾಯಿಸಿದ ನಂತರವೂ ಯಾವುದೇ ಸದಸ್ಯರು ಸಭೆಯಲ್ಲಿ ಪಾಲ್ಗೊಳ್ಳಬಹುದು., ಆದರೆ ಸದರಿ ಸಭೆಯಲ್ಲಿ ಪುನ: ಮತ ಚಲಾಯಿಸಲು ಅವಕಾಶವಿರುವುದಿಲ್ಲ.

ಕಂಪನಿಯಿಂದ ವಿದ್ಯುನ್ಮಾನ ಮಾಧ್ಯಮದ ಮೂಲಕ ವಾರ್ಷಿಕ ವರದಿ ರವಾನೆಯಾದ ಬಳಿಕ ಕಂಪನಿಯ ಶೇರುಗಳನ್ನು ಹೊಂದಿ ಕಂಪನಿಯ ಸದಸ್ಯರಾಗುವ ಮತ್ತು ಕೊನೆಯ ದಿನಾಂಕವಾದ 17 ಆಗಸ್ಟ್, 2020ರಂದು ಶೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿ ನಮ್ಮ ಆರ್ ಟಿ ಎ, ಅಂದರೆ, ಇಂಟಿಗ್ರೇಟೆಡ್ ರೆಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ನಂ. 30, ರಮಣ ರೆಸಿಡೆನ್ಸಿ, ನೆಲಮಹಡಿ, 4ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು 560003 ವಿಳಾಸದಲ್ಲಿ ಸಂಪರ್ಕಿಸಬಹುದು. ದೂ ಸಂ. 080-23460815 ರಿಂದ 818, ಫ್ಯಾಕ್ಸ್ ಸಂ: 080-23460819 ಅಥವಾ irg@integratedindia.inಗೆ ಮೈಲ್ ಮಾಡಿ ವಾರ್ಷಿಕ ವರದಿಯ ಪ್ರತಿಯನ್ನು ಪಡೆದುಕೊಳ್ಳಬಹುದು.

ಯಾವುದೇ ಪ್ರಶ್ನೆ/ವಿಚಾರಣೆಗಳಿದ್ದರೆ, ಸದಸ್ಯರಿಗಾಗಿ ಇರುವ ಪದೇ ಪದೇ ಕೇಳಿಬರುವ ಪ್ರಶ್ನೆ ಮತ್ತು ಬಳಕೆದಾರ ಕೈಪಿಡಿಯನ್ನು https://www.evotingindia.com/userdocs/FAQs.pdf ನ ಡೌನ್ ಲೋಡ್ ವಿಭಾಗದಲ್ಲಿ ನೋಡಬಹುದು ಅಥವಾ helpdesk.evoting@cdslindia.com ನಲ್ಲಿ ಸಿಡಿಎಸ್ಎಲ್ ಸಹಾಯ ಮೇಜಿಗೆ ಮೈಲ್ ಹಾಕಬಹುದು ಅಥವಾ 022-23058542/43 ಗೆ ಕರೆ ಮಾಡಬಹುದು.

24 ಆಗಸ್ಟ್, 2020 ರಂದು ನಡೆಯುವ ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಠರಾವುಗಳು ಅನುಮೋದನೆಗೊಂಡ ನಲವತ್ತೆಂಟು (48) ಗಂಟೆಗಳೊಳಗೆ ದೂರಗಾಮಿ ಇ-ಮತದಾನ ಮತ್ತು ಸರ್ವಸದಸ್ಯರ ಸಾಮಾನ್ಯ ಸಭೆಯ ಇ-ಮತದಾನದ ಫಲಿತಾಂಶವನ್ನು ಪರಿಶೀಲಕರ ವರದಿಯ ಸಹಿತ ಕಂಪನಿಯ ವೆಬ್ ಸೈಟ್‌ನಲ್ಲಿ ಮತ್ತು ಸಿಡಿಎಸ್ಎಲ್‌ನ ವೆಬ್ ಸೈಟ್ (www.evotingindia.com) ನಲ್ಲಿ, ಸದಸ್ಯರ ಮಾಹಿತಿಗಾಗಿ ಪ್ರಕಟಿಸಲಾಗುವುದು ಹಾಗೂ ಬಿ ಎಸ್ ಇ ಲಿಮಿಟೆಡ್‌ಗೆ ರವಾನಿಸಲಾಗುವುದು.

### ಪುಸ್ತಕಗಳ ಸಮಾಪ್ತಿ

ಸರ್ವಸದಸ್ಯರ ಸಭೆಯ ಕಾರಣ, ಸದಸ್ಯರ ರೆಜಿಸ್ಟರ್ ಮತ್ತು ಕಂಪನಿಯ ಶೇರು ವರ್ಗಾವಣೆ ಪುಸ್ತಕಗಳು 18 ಆಗಸ್ಟ್, 2020 ರಿಂದ 24 ಆಗಸ್ಟ್, 2020 ವರೆಗೆ (ಎರಡೂ ದಿನಗಳು ಒಳಗೊಂಡು) ಕಂಪನಿಗಳ ಕಾಯಿದೆ, 2013ರ ಪರಿಚ್ಛೇದ 91 ಮತ್ತು ಕಂಪನಿಗಳ ಆಡಳಿತ ಮತ್ತು ನಿರ್ವಹಣೆ (ತಿದ್ದುಪಡಿ) ನಿಯಮಗಳು, 2015 ರ ನಿಯಮ 10 ರ ಅನ್ವಯ ಸೂಚನೆಯನ್ನು ಸಹ ನೀಡಲಾಗಿದೆ.

ಸುನಿಲ್ ಆಗ್ರೋ ಫುಡ್ಸ್ ಲಿಮಿಟೆಡ್ ಪರವಾಗಿ

ಸ್ಥಳ : ಬೆಂಗಳೂರು

ಕೃತಿ ಮುರಳಿ ಕುಮಾರ್

ದಿನಾಂಕ: 4 ಆಗಸ್ಟ್, 2020

ಕಂಪನಿ ಕಾರ್ಯದರ್ಶಿ ಮತ್ತು ಅನುಪಾಲನಾಧಿಕಾರಿ